ನನ್ನ ಭಾವನೆಗಳನ್ನು ಹೇಗೆ ವ್ಯಕ್ತಪಡಿಸಬೇಕೋ ತಿಳಿಯುತ್ತಿಲ್ಲ. ಕಸಿ ಮಾಡಿದಷ್ಟೂ ಚಿಗುರೊಡೆವ ಗುಲಾಬಿ ಗಿಡದಂತೆ ಮನದಲ್ಲಿ ಟಿಸಿಲೊಡೆಯುತ್ತಿರುವ ಭಾವನೆಗಳನ್ನು ಅದುಮಿಡದೆ ಬರಹದಲ್ಲಿ ಸಂವೇದಿಸಿ ನನ್ನ ಪ್ರೇಮದ ಬಗ್ಗೆ ಪ್ರಾಮಾಣಿಸಲೇಬೇಕಾದ ಸಂದರ್ಭ ನನಗೀಗ ಬಂದಿದೆಯೆಂದರೆ ಅಸಂಗತವಾಗಲಾರದೇನೋ.

ನಾನು ಆಫೀಸಿಗೆ ಹೋಗುವ ದಾರಿಯಲ್ಲೇ ನಿನ್ನ ಮನೆಯಿದ್ದು, ಗೆಳತಿಯರೊಡನೆ ಕಾಲೇಜಿಗೆ ಹೊರಟು ನಿಂತಿರುವ ಇಲ್ಲವೇ ಸೀರೆಯ ನೆರಿಗೆಗಳನ್ನು ಚಿಮ್ಮುತ್ತಾ ಎದುರಾಗುವ, ಲೈಬ್ರರಿಯಲ್ಲಿ ಸ್ಪರ್ಧಾತ್ಮಕ ಪರೀಕ್ಷಾ ಪುಸ್ತಕಗಳನ್ನು ಓದುತ್ತಾ ತಲ್ಲೀನಳಾಗುವ ಮುಖಭಾವ. ಕಾಂತಿ ಸ್ವೀಟ್ಸ್ ಸ್ಟಾಲ್‌ನಲ್ಲಿ ರಸಗುಲ್ಲಾ ಸವಿಯುತ್ತ ಗೆಳತಿಯರೊಡನೆ ಗಲಗಲ ನಗುವ ರಸಕ್ಷಣಗಳೋ, ಬಿಸಿಲಲ್ಲಿ ಕೆಂಪಾಗಿ ಬಿರಬಿರನೆ ನಡೆದು ಬರುವ ದಣಿದ ಭಾವವೋ ಯಾವನೋ ಪೋಕರಿ ಚುಡಾಯಿಸಿದಾಗ ಕೋಪದಿಂದ ಹುಬ್ಬುಗಂಟಿಕ್ಕುವ ವಿಧಾನವೋ, ಆಗೀಗ ಎದುರಾಗುವಾಗ ನನ್ನನ್ನು ನೋಡಿಯೂ ನೋಡದಂತೆ ನಡೆವ ಲಜ್ಜಾಭಾವ, ಹೆಚ್ಚು ಮಾತನಾಡದ ಸ್ವಭಾವ. ನಿನ್ನೆಲ್ಲಾ ಭಾವಭಂಗಿಗಳು ನನ್ನೆದೆಯಲ್ಲಿ ಸ್ಕ್ಯಾನ್ ಆಗಿಬಿಟ್ಟಿವೆ. ಎಂದೆಂದೂ ತೆರೆಯಬಾರದೆಂದು ಮುಚ್ಚಿಬಿಟ್ಟಿದ್ದ ನನ್ನೆದೆಯ ಕದವನ್ನು ತಟ್ಟಿದ್ದು ನಿನ್ನ ಅಪರಾಧವೋ ನನ್ನ ಅದೃಷ್ಟವೋ ಸರಿಯಾದ ಕ್ಲಾರಿಟಿ ಸಿಕ್ಕಿಲ್ಲ. ಪ್ರೇಮವೆಂದರೆ ಬೆಚ್ಚಿಬೀಳುವಷ್ಟು ನಾಜೂಕಾದ ನನ್ನೆದೆಯಲ್ಲಿ ಪ್ರೇಮದ ಸಸಿ ನೆಟ್ಟು ಬಿಟ್ಟೆ. ವಂಚನೆಗೆ ಆಲ್ಟರ್‌ನೇಟಿವ್ ಪದವೆಂದರೆ 'ಹೆಣ್ಣೇ' ಎಂಬಷ್ಟು ಆಕ್ರೋಶಭರಿತ ನನ್ನ ಭಾವನೆಗಳನ್ನು ನಿನ್ನ ನೋಟದಲ್ಲೇ ಹೂತು ಗೋರಿ ಕಟ್ಟಿದ ಸಾಧನೆಗೆ ನಾನು ಸೋತ ಶರಣಾಗಲೇ. ಹೀಗೇಕೆ ಮಾಡಿದೆ?

ಬರೀ ನೋಟಕ್ಕೆ ನನ್ನ ನಿನ್ನ ಸಂಬಂಧ ಸೀಮಿತವಾಗಿದ್ದರೆ ಬೇಕೆನಿಸಿದಾಗ ನೋಡುತ್ತಾ, ರಾತ್ರಿ ಬೆಚ್ಚಗೆ ಹೊದ್ದು ನಿದ್ದೆ ಬರುವವರೆಗೂ ನಿನ್ನ ನೀಳ ಸಂಪಿಗೆ ಮುಖದಲ್ಲಿ ಅರಳುವ ನಗೆಯನ್ನು ನೆನಪಿಸಿಕೊಂಡು ಆಸ್ವಾದಿಸುತ್ತಾ, ಕನ್ನಡಿಯಂತೆ ಹೊಳೆವ ಕಂಗಳ ನೋಟಕ್ಕೆ ಬೆರಗಾಗುತ್ತಾ, ಕರಗಿ ನೀರಾಗುತ್ತಾ ನಿದ್ದೆಗೆ ಜಾರುತ್ತಾ, ಕನಸಲ್ಲಿ ಧೈರ್ಯವಾಗಿ ತಬ್ಬುತ್ತಾ, ಕಿತ್ತಲೆ ತುಟಿಗಳ ಜೇನ ಹೀರುತ್ತಾ, ಚಿಗುರು ಮೊಲೆ, ಬಾದಾಮಿ ಹೊಕ್ಕುಳ ಮೇಲೆ ಕೈ ಆಡಿಸುತ್ತಾ, ತಟ್ಟನೆ ಎಚ್ಚರವಾದಾಗ ಅದರ ನೆನಪಿನ ಮಜದಲ್ಲೇ ಬೆಳಕು ಹರಿಸುತ್ತಿದ್ದೆ. ಮರುದಿನ ಎದುರಾಗುವಾಗ ಇವಳು ನನ್ನವಳು ಕೇವಲ ನನ್ನವಳ ಮಾತ್ರವೆಂದು ನನ್ನನ್ನು ನಾನೇ ನಂಬಿಸಿಕೊಳ್ಳುತ್ತಾ, ಮಾತನಾಡಿಸುವುದಾದರೂ ಹೇಗಪ್ಪಾ ಎಂದು ತಹತಹಿಸುತ್ತಾ ಮುಂದೆ ಸಾಗುತ್ತಿದ್ದೆ. ತಿರುಗಿ ನೋಡುತ್ತಾ ಸಾಗುವ ಕುರಿತು ನಿನಗೇನನ್ನಿಸಿತ್ತೋ ನಾನರಿಯೆನಾದರೂ ನನ್ನ ಗೆಳೆಯರಿಗೆ ಮಾತ್ರ ಗುಮಾನಿ. 'ಏನಮ್ಮ ಹುಡುಗಿಗೆ ಮತ್ತೆ ಡವ್ ಸ್ಟಾರ್ಟೆ' ಅಂದಿದ್ದರು. 'ತುಂಬಾ ಡೀಸೆಂಟ್ ಗರ್ಲಯ್ಯ, ನೋ ಛಾನ್ಸ್' ಅಂತ ಹೆದರಿಸಿದ್ದರು. ಅವರೆಲ್ಲಾ ಕಾಳು ಹಾಕಿ ಸೋತಿದ್ದು ತಿಳಿದಿದ್ದ ನಾನು ಅವರ ಕಾಕದೃಷ್ಟಿ ನಿನ್ನ ಮೇಲೆರಗದಿರಲೆಂದು 'ಶಿ ಲವ್ಸ್‌ಮಿ' ಎಂದು ತಾಜಾ ಸುಳ್ಳು ಹೇಳಿಬಿಟ್ಟಿದ್ದೆ ಗೊತ್ತಾ?

ನೀನು ಆಗೀಗ ಲೈಬ್ರರಿಯಲ್ಲಿ ಭೈರಪ್ಪರ ಕಾದಂಬರಿಗಳನ್ನೇ ಆರಿಸಿಕೊಂಡು ಓದುತ್ತಾ ತನ್ಮಯಳಾದಾಗ ಬೇಸರವಾದರೂ, ಒಂದೇ ಕಾದಂಬರಿಗಾಗಿ ಇಬ್ಬರೂ ಬಡಿದಾಡಿ (ನನಗೇನೂ ಭೈರಪ್ಪ ಬೇಕಿರಲಿಲ್ಲ) ಸೋತು ನಿನಗೇ ಒಪ್ಪಿಸಿದಂತೆ ಮಾಡಿ ನಿನ್ನ ಸ್ನೇಹವ ಗೆದ್ದದ್ದನ್ನು ನೀನು ಖಂಡಿತ ಊಹಿಸಿರಲಾರೆ ಬಿಡು. ನಾನು ಭಗವಾನ್ ಅವರ ವೈಚಾರಿಕತೆಗೆ ಓಟು ಹಾಕಿದರೆ, ನೀನು ಮಸಿ ಬಳಿದವಳ ಭಾವನೆಗಳ ಪರಿವಾಗಿಯೇ ವಾದ ಮಾಡುವ ತರ್ಕ ಇಷ್ಟವಾಗದಿದ್ದರೂ, ಅರಳು ಹುರಿದಂತೆ ಮಾತನಾಡುವಾಗ ಅತ್ತಿತ್ತ ಸರಿದಾಡುವ ನಿನ್ನ ಮೀನಕಂಗಳ ಚೆಲುವು, ಕತ್ತು ಕೊಂಕಿಸಿದಾಗ ಕಿವಿಗಳಲ್ಲಿ ತೂಗಾಡುವ ಹ್ಯಾಂಗಿಂಗ್ಸ್ ಹೊಳಪು, ಬೊಂಬಾಟ್ ಬಾಡಿಲಾಂಗ್ವೇಜಿನ ಸಿರಿಗೆ ನಿನ್ನ ಕಣ್ಣುಗಳಲ್ಲಿ ಹುದುಗಿಸಿಕೊಳ್ಳಲೋ ಎನ್ನುವ ಯತ್ನದಲ್ಲಿ ಸೋತು ಶರಣಾಗಿದ್ದೆ. ವರ್ಷ ಉರುಳಿದರೂ ನಿನ್ನನ್ನು ಪ್ರೇಮಿಸುತ್ತಿದ್ದೇನೆಂದು ಹೇಳುವ ಧೈರ್ಯ ಸಾಲದೆ ನಿನ್ನ ಮಾತಿನ ಮಳೆಯಲ್ಲಿ ನೆನೆಯುತ್ತಾ ವಿರೋಧದ ಛತ್ರಿ ಬಿಡಿಸದೇ ಕೂತಿರುತ್ತಿದ್ದೆ. ಒಬ್ಬರ ಅಭಿರುಚಿ ಮತ್ತೊಬ್ಬರಿಗೆ ಇಷ್ಟವಾಗದಿದ್ದರೂ ಒಗ್ಗಿಸಿಕೊಳ್ಳುವ ಅರಗಿಸಿಕೊಳ್ಳುವ ಅನಿವಾರ್ಯತೆ ಅಥವಾ ದಾಸ್ಯ ಪ್ರೇಮ ಕಲಿಸಿದಷ್ಟು ಹಿತವಾಗಿ ಬೇರಾವುದೂ ಕಲಿಸಲಾರದೇನೋ!

ನಿನಗಾಗಿ ಭೈರಪ್ಪರನ್ನು ಮೆಚ್ಚಿಕೊಂಡರೂ ಮೋದಿಗೆ ಜೈ ಅನ್ನುವಷ್ಟು ರಾಜಿಯಾದರೂ ದಿನಗಳೆದಂತೆ ನೀನು ಸರಿದು ದೂರವಾದೆ ಏಕೆ? ಮಾತನಾಡಿಸಿದರೂ ಮುಖ ಕೊಡದೆ ಬಿರು ನೋಟ ನಡಿಗೆಯನ್ನು ನನ್ನ ಎದೆಯ ಮೇಲೆಯೇ ಇಡುತ್ತಾ ಕುಡಿಯೊಡೆದ ನನ್ನ ಆಸೆಗಳನ್ನು ಕೊಲೆ ಮಾಡಿದೆ. ಚಾಕು, ಚೂರಿ, ರಿವಾಲ್ವರ್, ಪಾಯಿಸನ್ ಯಾವ ಸಾಮಗ್ರಿಯೂ ಇಲ್ಲದೆ, ಯಾವ ಸಬೂಬೂ ಬಿಡದೆ ಕೊಲೆ ಮಾಡುವ ಶಕ್ತಿ ಇರೋದು ಹೆಣ್ಣಿಗೆ ಮಾತ್ರವೆ. ಹೃದಯಬಡಿತವನ್ನು ವಿನಾಕಾರಣ ನಿಲ್ಲಿಸುವ ಕೌಶಲ್ಯ, ಪ್ರೇಮಕೊಲೆಗೀಡಾದವ ಅಂತರ ಪಿಶಾಚಿಯಾಗಿ ಅಲೆಯುತ್ತಿದ್ದರೂ ಸೇಫಾಗಿರುವ ಕಾಠಿಣ್ಯ ನಿಮಗಲ್ಲದೆ ಮತ್ತಾರಿಗಿರಲು ಸಾಧ್ಯ?

ನೀನೇಕೆ ಮಾತು ನಿಲ್ಲಿಸಿದೆ? ಹೂವಿನಂತೆ ಅರಳುತ್ತಿದ್ದ ನಿನ್ನ ಕಂಗಳಿಂದ ಕೆಂಡ ಕಾರಿದ್ದರೂ ನನ್ನನ್ನು ನಾನು ಸುಟ್ಟುಕೊಳ್ಳಲೂ ಹಿಂಜರಿಯುತ್ತಿರಲಿಲ್ಲ. ಆದರೆ ಎಂತಹ ತಿರಸ್ಕಾರವನ್ನು ಸ್ಫುರಿಸುತ್ತವೆ ನಿನ್ನ ಕಣ್ಣುಗಳು. ವರ್ಷವೆಲ್ಲಾ ಹಿಂದುಮುಂದು ಓಡಾಡಿ, ಕಷ್ಟಪಟ್ಟು ಮಾತನಾಡಿಸಿ ನಿನ್ನ ಮನದಂಗಳದಲ್ಲಿ ನನ್ನ ಅಂತರಂಗದಲ್ಲಿ ಅಡಗಿರುವ ಭಾವನೆಗಳನ್ನು ಮುಚ್ಚಿಡದೆ ಬಿಚ್ಚಿ ಹರಡೋಣವೆಂಬ ಕಸರುತ್ತಿನಲ್ಲಿರುವಾಗಲೇ ಮೌನಗೌರಿ ಆದೆ ಏಕೆ?

ನೀನು ಮೌನವಾಗಿದ್ದರೂ ನಾನು ಊಹಿಸಬಲ್ಲೆ ಕಣೆ. ನಿನ್ನ ನಿಷ್ಕಲ್ಮಶ ಮನದಲ್ಲಿ ನನ್ನ ಗತಕಾಲದ ಚರಿತ್ರೆಯನ್ನು ಭಿತ್ತಿ ಮುಳ್ಳು ಬೆಳೆಸಿದವಳು ನಿನ್ನ ಗೆಳತಿಯೆಂದೂ ಬಲ್ಲೆ. ಚರಿತ್ರೆ ಅಂದೆ ನಿಜ. ರಾಜ್ಯ ಆಳುವುದು ಸಾಮ್ರಾಜ್ಯ ಕಟ್ಟುವುದು, ಯುದ್ಧ ಮಾಡುವುದಷ್ಟೇ ಚರಿತ್ರೆಯಲ್ಲ. ಅಪರಿಚಿತಳ ಹೃದಯ ಗೆಲ್ಲುವುದು, ಅಲ್ಲಿ ಪ್ರೇಮ ಸಾಮ್ರಾಜ್ಯ ಕಟ್ಟುವುದು, ಅದರ ಲೂಟಿ ಮತ್ತೊಬ್ಬರು ಮಾಡದಂತೆ ಕಣ್ಣಿಟ್ಟು ಕಾಯುವುದು ಸಹ ಚರಿತ್ರೆಯೆ.